ಊಟಕ್ಕೆ ಇಂಥಿಂಥದ್ದು ತಯಾರು ಮಾಡಬೇಕೆಂದು ಹೇಳುತ್ತಾರೆ. ಪ್ರತಿ ದಿವಸ ಏಳು ರೂಪಾಯಿ ಕೊಡುವ ಯಜಮಾನರು ಊಟಕ್ಕೆ ಏನೇನು ಕೊಡುತ್ತೀರಿ? ಏನೇನು ಕೊಡಬೇಕೆಂದು ಆದೇಶವನ್ನು ನೀವು ಕೊಡುತ್ತೀರಿ? ಇಷ್ಟು ತರಕಾರಿ ಕೊಡಬೇಕು, ಇಡ್ಲಿ ತಿಂಡಿ ಕೊಡಬೇಕು, ಎಣ್ಣೆ ಬೆಣ್ಣೆ, ಹಾಲು ಮೊಸರು ಏನಾದರೂ ಕೊಡುವುದಕ್ಕೆ ಈ ತರಹ ಕೊಡಬೇಕೆನ್ನುವ ಪಟ್ಟಿಯನ್ನು ಕೊಡುತ್ತೀರಾ ಹೇಗೆ? ನೀವು 200 ರೂಪಾಯಿ ಕೊಟ್ಟರೆ ಆಥವಾ 500 ರೂಪಾಯಿ ಕೊಡಿ ಹಾಸ್ಟಲ್ ಸೂಪರ್‌ಇನ್‌ಟೆಂಡೆಂಟ್ ಅವರಿಗೆ ಒಂದು ಪಟ್ಟಿಯನ್ನು ಕೊಟ್ಟು ಒಂದು ಊಟಕ್ಕೆ ಇಂಥಿಂಥ ಪದಾರ್ಥ ಇರಬೇಕೆಂದು ಈ ತರಹ ಮಾಡಬೇಕೆನ್ನುವ ಪಟ್ಟಿಯನ್ನು ನೀವು ಕೊಟ್ಟಿದ್ದೀರಾ? ದುಡ್ಡು ಆಮೇಲೆ ಜಾಸ್ತಿ ಕೊಡಿ.

ಶ್ರೀ ಬಿ. ಶಿವಣ್ಣ :– ಮಾನ್ಯ ಉಪಾಧ್ಯಕ್ಷೆಣಿಯವರೆ, ಮಾನ್ಯ ಸದಸ್ಯರು ಹೇಳಿದ್ದೆಲ್ಲ ಇರಬೇಕೆನ್ನುವುದು ನನಗೂ ಅನಿಸುತ್ತದೆ. ನಮ್ಮ ಹಿರಿಯರು ಅಂದರೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಫೈನಾನ್ಸ್ ಮಿನಿಸ್ಟರ್‌ರವರು ದುಡ್ಡು ಕೊಟ್ಟಮೇಲೆ ನಮ್ಮ ಇಲಾಖೆಯವರು ಎಲ್ಲವನ್ನು ನೋಡಿಕೊಂಡು ಹಣವನ್ನು ಆಮೇಲೆ ಖರ್ಚುಮಾಡುತ್ತಿದ್ದೇವೆ. ಮಾನ್ಯ ಸದಸ್ಯರ ಸಲಹೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹಣ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಮುಖ್ಯ ಮಂತ್ರಿಗಳು ಈ ವಿಷಯದಲ್ಲಿ ಬಹಳ ಧಾರಾಳವಾಗಿದ್ದಾರೆ. ತಾವು 500 ರೂಪಾಯಿ ಮಾಡಿ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮದ ಬಗ್ಗೆ

513. ಶ್ರೀ ಆಂಜನಮೂರ್ತಿ (ನೆಲಮಂಗಲ) :– ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ಸಾಲುಗಳಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಅಭಿವೃದ್ಧಿ ನಿಗಮವು ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ನೆಲಮಂಗಲ ಮತ ಕ್ಷೇತ್ರಕ್ಕೆ ನೀಡಿದ ಹಣವೆಷ್ಟು? (ಹೋಬಳಿವಾರು ಗ್ರಾಮವಾರು ಮಾಹಿತಿಯನ್ನು ಒದಗಿಸುವುದು);

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

ಅ)

	ರೂ.
1987–88	385050–00
1988–89	554250–00
1989–90	290155–00
ಒಟ್ಟು	1229455–00

ಹೋಬಳಿ : ಗ್ರಾಮವಾರು ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ

ನೆಲಮಂಗಲ ತಾಲ್ಲೂಕು

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ 1987–88ರ ನೆಲಮಂಗಲದ ಕ್ಷೇತ್ರದ ಸಾಲ ಮಂಜೂರಾತಿ ಗ್ರಾಮಾವಾರು ಮಾಹಿತಿ.

ಕ್ರಮ ಸಂಖ್ಯೆ	ಗ್ರಾಮದ ಹೆಸರುಗಳು	ಬೀಜಧನ	ಸಹಾಯಧನ	ಫಲಾನುಭವಿಗಳ ಸಂಖ್ಯೆ
1	2	3	4	5
1.	ಕೆರೆಕೆತ್ತಿಗನೂರು	3000–00	3000–00	1
2.	ಮಾಚನಹಳ್ಳಿ	15000–00	15000–00	7
3.	ಹನುಮಂತಪುರ	1500–00	1500–00	1
4.	ಕೋಡಿಹಳ್ಳಿ	4750–00	4750–00	4
5.	ನರಸಪುರ	3000–00	3000–00	1
6.	ತ್ಯಾಮಗೊಂಡ್ಲು	3250–00	3250–00	2
7.	ನೆಲಮಂಗಲ	1000–00	1000–00	1
8.	ಕಲ್ಯಾಣಿ ಜಯನಗರ	3000–00	3000–00	2
9.	ನೆಲಮಂಗಲ	1250–00	1250–00	1
10.	ನೆಲಮಂಗಲ	7125–00	7125–00	3
11.	ಬಾನುವಾಡಿ	2250–00	2250–00	2
12.	ಹೊನ್ನಗಾನಹಳ್ಳಿ	10750–00	10750–00	9
13.	ಮಲ್ಲಾಪುರ	19750–00	19750–00	16
14.	ಕಾಂಚನಹಳ್ಳಿ	7500–00	7500–00	6
15.	ರಾಯನ್‌ನಗರ	1250–00	1250–00	1
16.	ನರಸೀಪುರ	2500–00	2500–00	1
17.	ಕಾಡಿಗನಬೊಮ್ಮನಹಳ್ಳಿ	2500–00	2500–00	1
18.	ಚಿಕ್ಕಮಾರನಹಳ್ಳಿ	5000–00	5000–00	2
19.	ಅಗಲಗುಪ್ಪೆ	8000–00	8000–00	5
20.	ಲಿಂಗನಹಳ್ಳಿ	22000–00	22000–00	14
21.	ಲಕ್ಕೇರೆ	13400–00	13400–00	10
22.	ಬೆರೆಚನಹಳ್ಳಿ	1500–00	1500–00	1

1	2	3	4	5
23.	ಚಿಟ್ಟಹಳ್ಳಿಪಾಳ್ಯ	2500–00	2500–00	1
24.	ಜೋಗಿಪಾಳ್ಯ	3500–00	3500–00	2
25.	ಲಕ್ಕೂರು	1500–00	1500–00	1
26.	ಸಣ್ಣಪಾಪನಪಾಳ್ಯ	1125–00	1125–00	1
27.	ಮಾಕನಹಳ್ಳಿ	20750–00	20750–00	16
28.	ತ್ಯಾಮಗೊಂಡ್ಲು	1125–00	1125–00	1
29.	ರಾಯನ್‌ನಗರ	10750–00	10750–00	9
30.	ಕೋಡಿಹಳ್ಳಿ	7000–00	7000–00	5
31.	ಕಲ್ಯಾಣಿ ಜಯನಗರ	5000–00	5000–00	2
	ಒಟ್ಟು	**192525–00**	**192525–00**	**129**

1988–89

ಕ್ರಮ ಸಂಖ್ಯೆ	ಗ್ರಾಮದ ಹೆಸರುಗಳು	ಬೀಜಧನ	ಸಹಾಯಧನ	ಫಲಾನುಭವಿಗಳ ಸಂಖ್ಯೆ
1.	ಬೀರನಪಾಳ್ಯ	4750–00	4750–00	3
2.	ವಿಶ್ವೇಶ್ವರಪುರ	35750–00	35750–00	17
3.	ಗಂಗಿಗಾರಪಾಳ್ಯ	1000–00	1000–00	1
4.	ದೇವರಹೊಸಹಳ್ಳಿ	28250–00	28250–00	20
5.	ಮಾರಗೊಂಡನಹಳ್ಳಿ	6125–00	6125–00	4
6.	ಶಿವಗಂಗೆ	47625–00	47625–00	26
7.	ತ್ಯಾಮಗೊಂಡ್ಲು	44125–00	44125–00	20
8.	ನೆಲಮಂಗಲ	18500–00	18500–00	11
9.	ಮಲ್ಲಾಪುರ	33500–00	33500–00	21
10.	ಲಿಂಗನಹಳ್ಳಿ	19250–00	19250–00	12
11.	ಬಾನುವಾಡಿ	3000–00	3000–00	2
12.	ರಾಯನ್‌ನಗರ	14250–00	14250–00	10
13.	ಮಾಕನಹಳ್ಳಿ	21000–00	21000–00	20
	ಮೊತ್ತ :	**277125–00**	**277125–00**	**167**

1989–90

ಕ್ರಮ ಸಂಖ್ಯೆ	ಗ್ರಾಮದ ಹೆಸರುಗಳು	ಬೀಜಧನ	ಸಹಾಯಧನ	ಫಲಾನುಭವಿಗಳ ಸಂಖ್ಯೆ
1.	ಸೊಂಪುರ	4375–00	4375–00	5
2.	ಸೊಂಪುರ	–	1500–00	1
3.	ಒಬಳಪುರ, ಮಾದೇನಹಳ್ಳಿ	7750–00	12500–00	9
4.	ರಾಯನ್‌ನಗರ	7750–00	7750–00	3
5.	ರಾಯನ್‌ನಗರ		12000–00	5
6.	ನೆಲಮಂಗಲ		15500–00	6
7.	ಕುಲುವರಬಾವಿ		1625–00	1
8.	ವಿಶ್ವೇಶ್ವರಪುರಂ		1500–00	1
9.	ತ್ಯಾಗದಹಳ್ಳಿ		41750–00	18
10.	ಹೊನ್ನಗಾನಹಳ್ಳಿ		71375–00	35
11.	ಮುದ್ದಸಿಂಗನಹಳ್ಳಿ		2500–00	1
12.	ಮಾದೇಸಹಳ್ಳಿ		11750–00	8
13.	ಕನ್ನಳ್ಳಿ		4125–00	3
14.	ಶ್ರೀನಿವಾಸಪುರ		12000–00	8
15.	ಲಕ್ಕೂರು		28250–00	17
16.	ಹನುಮಂತಪುರ		3000–00	1
17.	ಸುಭಾಷ್‌ನಗರ		1500–00	1
18.	ದೊಡ್ಡ ಬೆಲೆ		6500–00	5
19.	ಬುದ್ದಿಹಾಲ್		12980–00	11
20.	ಬಾವಿಕೆರೆ		10800–00	10
21.	ಹುಲ್ಲಹಾರ್ಯ		4500–00	2
22.	ಆಲೂರು		8750–00	5
23.	ಗಂಟಿಬೋಸಲಹಳ್ಳಿ		1500–00	1
	ಮೊತ್ತ	**12125–00**	**278030–00**	**157**

ಶ್ರೀ ಅಂಜನಮೂರ್ತಿ :– ಮಾನ್ಯ ಉಪಾಧ್ಯಕ್ಷರಿಣಿಯವರೆ, ನನ್ನ ಪ್ರಶ್ನೆ ಈ ರೀತಿ ಇದೆ. ಕಳೆದ ಮೂರು ಸಾಲುಗಳಲ್ಲಿ ಕರ್ನಾಟಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿ ನಿಗಮವು ವಿಶೇಷ ಘಟಕ ಯೋಜನೆಗಳ ಅಡಿಯಲ್ಲಿ ನೆಲಮಂಗಲ ಮತಕ್ಷೇತ್ರಕ್ಕೆ ನೀಡಿದ ಹಣವೆಷ್ಟು? ಹೋಬಳಿವಾರು ಮತ್ತು ಗ್ರಾಮವಾರು ಮಾಹಿತಿಯನ್ನು ಒದಗಿಸಬೇಕೆಂದು ಕೇಳಿದ್ದೇನೆ. ನನ್ನ ಮತದಾರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ವಿವರಗಳನ್ನು ಕೊಡದೆ ನೆಲಮಂಗಲ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ವಿವರಗಳನ್ನು ಕೊಟ್ಟಿದ್ದಾರೆ. ನನ್ನ ಮತದಾರ ಕ್ಷೇತ್ರಕ್ಕೆ ದೊಡ್ಡಬಳ್ಳಾಪುರ ತಾಲ್ಲೂಕಿನ ಒಂದು ಹೋಬಳಿ, ಮಾಗಡಿ ತಾಲ್ಲೂಕಿನ ಒಂದು ಹೋಬಳಿ ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಒಂದು ಹೋಬಳಿ ಬರುತ್ತದೆ. ನನ್ನ ಮತದಾರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದೆ. ಆದರೆ ಇಲ್ಲಿ ನೆಲಮಂಗಲ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ವಿವರ ಕೊಟ್ಟಿದ್ದಾರೆ ಅದನ್ನು ನಾನು ಕೇಳಿರಲಿಲ್ಲ.

ಶ್ರೀ.ಬಿ. ಶಿವಣ್ಣ :– ನಾನು ಉತ್ತರದಲ್ಲಿ ವಿವರವಾಗಿ ಹೇಳಿದ್ದೇನೆ. 1987–88ರಲ್ಲಿ 3 ಲಕ್ಷದ 85 ಸಾವಿರದ 050 ರೂಪಾಯಿಗಳನ್ನು 1988–89ನೇ ಸಾಲಿನಲ್ಲಿ 5 ಲಕ್ಷದ 54 ಸಾವಿರದ 250 ರೂಪಾಯಿಗಳನ್ನು ಹಾಗೂ 1989–90ನೇ ಸಾಲಿನಲ್ಲಿ 2 ಲಕ್ಷದ 90 ಸಾವಿರದ 555 ರೂಪಾಯಿಗಳನ್ನು ನೆಲಮಂಗಲ ಮತದಾರ ಕ್ಷೇತ್ರಕ್ಕೆ ಕೊಟ್ಟಿದ್ದೇವೆಂದು ಹೇಳಿದ್ದೇವೆ. ಒಟ್ಟು 12 ಲಕ್ಷದ 29 ಸಾವಿರದ 455 ರೂಪಾಯಿಗಳನ್ನು ಇದುವರೆಗೆ ಆ ತಾಲ್ಲೂಕಿಗೆ ಕೊಟ್ಟಿದ್ದೇವೆ.

ಶ್ರೀ ಅಂಜನಮೂರ್ತಿ :– ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 1987–88ನೇ ಸಾಲಿನಲ್ಲಿ 129 ಜನ ಫಲಾನುಭವಿಗಳಿಗೆ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಹಾಯ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ 40 ಜನಗಳಿಗೆ ಮಾತ್ರ ಆ ಸೌಲಭ್ಯ ಸಿಕ್ಕಿದೆ. 1988–89ನೇ ಸಾಲಿನಲ್ಲಿ 167 ಜನರಿಗೆ ಸಹಾಯ ಮಾಡಿದ್ದೇವೆಂದು ಹೇಳಿದ್ದಾರೆ ಆದರೆ ನಿಜವಾಗಿಯೂ ಸಹಾಯ ಸಿಕ್ಕಿರುವುದು 65 ಜನರಿಗೆ ಮಾತ್ರ. ಅದೇ ರೀತಿಯಾಗಿ 1989–90ನೇ ಸಾಲಿನಲ್ಲಿ 157 ಜನರಿಗೆ ಸಹಾಯ ಮಾಡಿದ್ದೇವೆಂದು ಹೇಳಿದ್ದಾರೆ ಆದರಲ್ಲಿ ನಿಜವಾಗಿಯೂ ಸಹಾಯ ದೊರತಿರುವುದು 34 ಜನರಿಗೆ ಮಾತ್ರ. ಇನ್ನು ಮುಂದೆ ಸತ್ಯಕ್ಕೆ ದೂರವಾದ ಇಂಥ ಮಾಹಿತಿಯನ್ನು ಕೊಡಬಾರದೆಂದು ಹೇಳುತ್ತೇನೆ.

ಶ್ರೀ. ಬಿ. ಶಿವಣ್ಣ :– ಮಾನ್ಯ ಸದಸ್ಯರು ಹೀಗೆ ಹೇಳುತ್ತಾರೆ ಆಂದಮೇಲೆ ನಾನು ಅಧಿಕಾರಿಗಳಿಗೆ ಹೇಳಿ ಸರಿಯಾದ ಉತ್ತರ ತರಿಸಿಕೊಡುತ್ತೇನೆ. ಏನಾದರೂ ದೂರುಗಳು ಇದ್ದರೆ ನನ್ನ ಜೊತೆಯಲ್ಲಿ ಅವರು ಬರಲಿ ನಾನು ಆ ತಾಲ್ಲೂಕಿನಲ್ಲಿ ವಿಸಿಟ್ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಶ್ನೆ : 187(643)

ಉಪಾಧ್ಯಕ್ಷರು :– ಶ್ರೀ ನಾರಾಯಣಸ್ವಾಮಿಯವರೇ, ಮುಖ್ಯ ಮಂತ್ರಿಗಳು ಬಿ.ಎ.ಸಿ. ಮೀಟಿಂಗ್‌ನಲ್ಲಿದ್ದಾರೆ. ಆದ್ದರಿಂದ ಇದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ. ಎಂ. ನಾರಾಯಣಸ್ವಾಮಿ :– ನಾನು ಕೇಳಿದಂಥ ಎಲ್ಲಾ ಪ್ರಶ್ನೆಗಳಿಗೆ, ಮುಖ್ಯ ಮಂತ್ರಿಗಳು ಬರಬೇಕು ಎನ್ನುವ ಕಾರಣಕ್ಕೋ ಅಥವಾ ವಿದ್ಯಾಮಂತ್ರಿಗಳು ಬರಬೇಕು ಎನ್ನುವ ಕಾರಣಕ್ಕೋ ಮುಂದೂಡಲಾಗುತ್ತಿದ್ದು, ಕೆಲವು ಲಿಖಿತ ಮೂಲಕ ಕೊಡತಕ್ಕಂಥ ಉತ್ತರಗಳನ್ನು ಕಳಿಸಿದ್ದೇವೆ ಎಂದು ಹೇಳಿದ್ದಾರೆ. ಆದರೆ ಸುಮಾರು ಒಂದು ವಾರದಿಂದ ಎಷ್ಟು ದಿವಸಗಳಲ್ಲಿ ಲಿಖಿತ ಮೂಲಕ ಉತ್ತರ ಕೊಡುವ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಟ್ಟಿಲ್ಲ. ದಯವಿಟ್ಟು ನಮ್ಮ ಸಹಾಯಕ್ಕೆ ತಾವು ಬರಬೇಕಾಗುತ್ತದೆ. ಸರ್ಕಾರ ಹೀಗೆ ಬೇಜವಾಬ್ದಾರಿಯಿಂದ ವರ್ತನೆ ಮಾಡಿದರೆ ಸಹಿಸುವುದಕ್ಕೆ ಸಾಧ್ಯವಿಲ್ಲ. ನಾನಂತೂ ಇಲ್ಲಿ ಧರಣಿ ಕುಳಿತುಕೊಳ್ಳಬೇಕಾಗುತ್ತದೆ. ಅನೇಕ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರ ಕೊಟ್ಟಿದ್ದೇವೆ ಎಂದು ಹೇಳುವಾಗ ನನಗೆ ಉತ್ತರಗಳೇ ಬಂದಿರುವುದಿಲ್ಲ. ಜೊತೆಗೆ ಎಲ್ಲ ಪ್ರಶ್ನೆಗಳಿಗೆ ಕೂಡ ಮುಖ್ಯ ಮಂತ್ರಿಗಳು, ವಿದ್ಯಾಮಂತ್ರಿಗಳು ಬರಬೇಕೆಂದು ಯಾವುದೋ ಒಂದು ನೆಪವೊಡ್ಡಿ ಮುಂದೂಡತಕ್ಕಂಥ ಪರಿಸ್ಥಿತಿ ಇದೆ. ದಯಮಾಡಿ ಈ ರೀತಿ ಆಗದ ಹಾಗೆ ತಾವು ನೋಡಿಕೊಳ್ಳಬೇಕು.